**ಎಂವಿಸಿಃ 2540/2024 ಪಿಡಬ್ಲ್ಯು 1 ಪುನೀತ್**

**ಸಾಕ್ಷಿಯನ್ನು ದಿಃ 28.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನನಗೆ ಕನ್ನಡ ಓದಲು ಅಷ್ಟಾಗಿ ಬರುವುದಿಲ್ಲ. ಅಪಘಾತ ಆದಾಗ ನನಗೆ 17 ವರ್ಷ ವಯಸ್ಸಾಗಿತ್ತು. ವೈಧ್ಯರಲ್ಲಿ 17 ವರ್ಷ ಎಂದು ನಾನು ಹೇಳಿ ಬರೆಯಿಸಿಲ್ಲ. ಅಪಘಾತ ಆದಾಗ ನನಗೆ ಪ್ರಜ್ಞೆ ಇರಲಿಲ್ಲ. ಈಗ ನನಗೆ 20 ವರ್ಷ ವಯಸ್ಸು. ಅಪಘಾತ ದಿಃ 01.10.2024 ರಲ್ಲಿ ಆಗಿದೆ. ಅಪಘಾತ ಆದಾಗ ನನಗೆ 18 ವರ್ಷ ತುಂಬಿರಲಿಲ್ಲ. ಆ ದಿನ ನಾನು ಒಬ್ಬನೇ ಜಮೀನಿಗೆ ಹೋಗಿ ಬರುತ್ತಿದ್ದೆ. ಈ ರೀತಿ ಪೋಲೀಸರಲ್ಲಿ ನಾನು ಹೇಳಿಕೆ ಕೊಟ್ಟಿಲ್ಲ. ಪೋಲೀಸರು ಆಸ್ಪತ್ರೆಗೆ ಬಂದು ಹೇಳಿಕೆ ಪಡೆದಿದ್ದಾರೆ. ಆಗ ನಾನು ಒಬ್ಬನೇ ಜಮೀನಿಗೆ ಹೋಗಿ ಬರುತ್ತಿದ್ದೆ ಎಂದು ಪೋಲೀಸರಲಿಲ್ಲ ಹೇಳಿದ್ದೇನೋ ಇಲ್ಲವೋ ನೆನಪಿಲ್ಲ. ನನ್ನ ಅರ್ಜಿಯಲ್ಲಿ ಹಾಗೂ ದೂರಿನಲ್ಲಿ ಸ್ನೇಹಿತರೊಂದಿಗೆ ಜಮೀನಿನಲ್ಲಿ ಹೋಗಿ ಬರುತ್ತಿದ್ದೆ ಎಂದು ಬರೆದಿದ್ದರೆ ಅದು ಸುಳ್ಳು. ಈಗ ನಾನು ವಿದ್ಯಾಭ್ಯಾಸ ಮಾಡುತ್ತಿಲ್ಲ. ಅಪಘಾತ ಆದಾಗಲೂ ನಾನು ವಿದ್ಯಾಭ್ಯಾಸ ಮಾಡುತ್ತಿರಲಿಲ್ಲ.

2. ಅಪಘಾತ ಆದಾಗ ರಾತ್ರಿ 08.45 ಗಂಟೆ ಆಗಿತ್ತು. ಸಾಮಾನ್ಯವಾಗಿ ವ್ಯವಸಾಯ ಮಾಡುವವರು ಬೆಳಗಿನಿಂದ ಸಂಜೆ 05.30 ರಿಂದ 6.00 ಗಂಟೆಗೆ ಕೆಲಸ ಮುಗಿಸಿ ಮನೆಗೆ ಹೋಗುತ್ತಾರೆ ಎಂದರೆ ಸರಿ. 6 ಗಂಟೆ ಕೆಲಸ ಮುಗಿಸಿ ತರಕಾರಿಗಳಿಗೆ ಟಾರ್ಪಲ್ ಹಾಕುತ್ತಿದ್ದೆ ಎನ್ನುತ್ತಾರೆ. ಆ ದಿನ ಮನೆಗೆ ಬಂದು ವಾಪಸ್ ಜಮೀನಿಗೆ ಹೋಗಿದ್ದೆ. 7.00 ಗಂಟೆಯವರೆಗೂ ಮನೆಯಲ್ಲಿದ್ದು ನಂತರ ಹೋಗಿದ್ದೇನು. ನಾನು ನನ್ನ ಅಕ್ಕ ಮತ್ತು ತಾಯಿಗೆ ಹೇಳಿ ಹೋಗಿದ್ದೇನೆ.

3. ಅಪಘಾತ ಆದಾಗ ನನ್ನನ್ನು ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತಾರೆ. ಹತ್ತಿರದಲ್ಲಿದ್ದ ಜಯಪುರ ಆಸ್ಪತ್ರೆಗೆ ಹೋಗಿ ತೋರಿಸಿರುವುದಿಲ್ಲ. ಜಯಪುರ ಆಸ್ಪತ್ರೆಗೆ ಹೋಗಲು ತೊಂದರೆ ಇರಲಿಲ್ಲ. ಸ್ಥಳದಲ್ಲಿ ದೇವಸ್ಥಾನದಲ್ಲಿ ಮಾತನಾಡುತ್ತಾ ಕುಳಿತಿದ್ದವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಜೆ.ಎಸ್.ಎಸ್ ಆಸ್ಪತ್ರೆಗೆ ಬಂದಾಗ ನನಗೆ ಪ್ರಜ್ಞೆ ಇರಲಿಲ್ಲ. ನನ್ನನ್ನು ಯಾರು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ನನ್ನನ್ನು ಮೊದಲಿಗೆ ಗುರುಮೂರ್ತಿ ಎನ್ನುವ ವೈದ್ಯರು ನೋಡಿದ್ದಾರೆ. ಅವರು ಪರೀಕ್ಷಿಸುವಾಗ ನನಗೆ ಪ್ರಜ್ಞೆ ಬಂದಿತ್ತು. ನನ್ನನ್ನು ಕ್ಯಾಶುಯಾಲಿಟಿಯಲ್ಲಿ ನನ್ನನ್ನು ಪರೀಕ್ಷಿಸಿರುತ್ತಾರೆ. ಅವರು ನನ್ನ ಹೇಳಿಕೆಯನ್ನು ಕ್ಯಾಶುಯಾಲಿಟಿಯಲ್ಲಿ ಪಡೆದುಕೊಂಡಿಲ್ಲ. ಆಸ್ಪತ್ರೆಯ ದಾಖಲೆಗಳಲ್ಲಿ ಗಾಯಾಳು ಅವರ ಸ್ನೇಹಿತರೊಂದಿಗೆ ಆಸ್ಪತ್ರೆಗೆ ಬಂದಿದ್ದಾರೆ ಎಂದು ಬರೆದಿದ್ದರೆ ಅದು ಸುಳ್ಳು ಎಂದರೆ ನನಗೆ ಪ್ರಜ್ಞೆ ಇರಲಿಲ್ಲ ಎನ್ನುತ್ತಾರೆ.

4. ನಾನು 6 ದಿನ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅಪಘಾತ ಸ್ಥಳ ಚುಂಚನಹುಂಡಿ ಗ್ರಾಮಕ್ಕೆ ಹೋಗುವ ರಸ್ತೆ ಎಂದರೆ ಸರಿ. ಸದರಿ ರಸ್ತೆ 15 ಅಡಿ ಟಾರ್ ರಸ್ತೆ ಎಂದರೆ ಸರಿ. ಅಪಘಾತ ಪಡಿಸಿದ ವಾಹನ ಯಾವ ರೀತಿ ಬಂದು ಎಂದು ನನಗೆ ಗೊತ್ತಿಲ್ಲ. ಆ ದಿನ ನಾನು ಹಾಗೂ ನನ್ನ ಸ್ನೇಹಿತರು ರಸ್ತೆಯಲ್ಲಿ ಕೂಗಾಡಿಕೊಂಡು ನಿಗಾ ಇಲ್ಲದೇ ಹೋಗುತ್ತಿದ್ದೇವು ಎಂದರೆ ಸರಿಯಲ್ಲ. ವಾಹನ

ಚಾಲಕ ನಿದಾನವಾಗಿ ಬರುತ್ತಿದ್ದು ಅಪಘಾತದಲ್ಲಿ ನನ್ನ ನಿರ್ಲಕ್ಷ್ಯತನ ಕಾರಣ ಎಂದರೆ ಸರಿಯಲ್ಲ. ಅಪಘಾತಕ್ಕೂ ನನಗಾದ ಗಾಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಎಡವಿ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

5. ದೂರನ್ನು ನನ್ನ ಅಕ್ಕ ನೀಡಿದ್ದಾರೆ. ಅವರು ನಮ್ಮೊಂದಿಗೆ ವಾಸ ಇದ್ದಾರೆ. ನಾನು ಆಸ್ಪತ್ರೆಗೆ ಹೋದಾಗಲೇ ನನ್ನ ವಿಚಾರ ತಿಳಿದಿದೆ. ರಾತ್ರಿ ಅವರು ಆಸ್ಪತ್ರೆಗೆ ಬಂದಿದ್ದಾರೆ. ಅಪಘಾತದ ತಕ್ಷಣ ದೂರು ನೀಡಲು ನನ್ನ ಮನೆಯವರಿಗೆ ತೊಂದರೆ ಇರಲಿಲ್ಲ. ನನ್ನ ತಪ್ಪಿನಿಂದ ಅನಾಹುತ ಆಗಿದ್ದ ಕಾರಣ ಅದೇ ದಿನ ದೂರನ್ನು ನೀಡಲ್ಲ ಎಂದರೆ ಸರಿ. ಆ ಸಂದರ್ಬದಲ್ಲಿ ನಾನು ನಮ್ಮ ಜಮೀನಿನ ಕೆಲಸ ಮಾಡುತ್ತಿದ್ದೆ. ಜಮೀನು ನನ್ನ ಅಜ್ಜಿಯ ಹೆಸರಿನಲ್ಲಿದೆ. ಸದರಿ ಜಮೀನಿಗೆ ಆರ್.ಟಿ.ಸಿ ಹಾಜರು ಪಡಿಸಿಲ್ಲ. ನಾನು 10 ನೇ ತರಗತಿಯನ್ನು ಅನುತ್ತೀರ್ಣನಾಗಿ ಮನೆಯಲ್ಲಿದ್ದೆ ಎಂದರೆ ಸರಿಯಲ್ಲ, ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ. 4 ನಕ್ಷೆ ನಾನು ಹೇಳಿ ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ. 4 ರ ಪ್ರಕಾರ ಬೈಕ್ ನಮ್ಮ ಊರು ಚುಂಚರಾಯನಹುಂಡಿಯಿಂದ ಬಂದಿದೆ ಎಂದರೆ ಸರಿ. ನಾನು ಹಾರೋಹಳ್ಳಿಯಿಂದ ಮನೆ ಕಡೆ ಹೋಗುತ್ತಿದ್ದೆ. ನನಗೆ ದಿಕ್ಕುಗಳು ಗೊತ್ತಾಗುವುದಿಲ್ಲ. ಅಪಘಾತ ಪಶ್ಚಿಮ ದಿಕ್ಕಿನಲ್ಲಿ ಆಗಿದೆ ಎಂದು ನಿಪಿ. 4 ರಲ್ಲಿ ಬರೆದಿದ್ದಾರೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಅಪಘಾತ ಸ್ಥಳದಲ್ಲಿ ಫುಟ್ ಪಾತ್ ಇದೆ. ಅಪಘಾತ ಸ್ಥಳದಲ್ಲಿ ಫುಟ್ ಪಾತ್ ಇಲ್ಲದಿದ್ದರೂ ಎದುರುದಾರರಿಂದ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದ್ದು ನಾವು ಪರಿಹಾರ ಪಡೆಯಲು ಭಾದ್ಯರಲ್ಲ ಎಂದರೆ ಸರಿಯಲ್ಲ. ವೈದ್ಯರಲ್ಲಿ ಅಪಘಾತ ಪಡಿಸಿದ ವಾಹನ ಸಂಖ್ಯೆಯನ್ನು ಹೇಳಲು ತೊಂದರೆ ಇರಲಿಲ್ಲ ಎಂದರೆ ನನಗೆ ಜ್ಞಾಪಕ ಇರಲಿಲ್ಲ ಎನ್ನುತ್ತಾರೆ. ಅಪಘಾತ ಎದುರುದಾರರ ವಾಹನದಿಂದ ಆಗದೇ ಇರುವ ಕಾರಣ ವಾಹನ ಸಂಖ್ಯೆ ಜ್ಞಾಪಕ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿಡುಗಡೆಯಾದ ನಂತರ ಚಿಕಿತ್ಸೆಗೆ 10 ಬಾರಿ ಹೋಗಿದ್ದೇನೆ. ಹಾಜರು ಪಡಿಸಿದ ದಾಖಲೆಗಳನ್ನು ಬಿಟ್ಟರೆ ಚಿಕಿತ್ಸೆಗೆ ಸಂಬಂಧಿಸಿದಂತೆ ನನ್ನ

ಬಳಿ ಬೇರೆ ದಾಖಲೆಗಳು ಇಲ್ಲ. ನಾನು 10 ಬಾರಿ ಚಿಕಿತ್ಸೆಗೆ ಹೋಗಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ದಾಖಲೆಗಳನ್ನು ಸೃಷ್ಠಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪರಿಹಾರ ಪಡೆಯಲು ಭಾಧ್ಯನಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಉದ್ಯೋಗ ಮಾಡದೇ ಇದ್ದರೂ ಸಹ ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.